# ಚಂದನವನದಲ್ಲಿ ಹೊಸತನದ ಫ್ಲೇವರ್



'ಆಚಾರ್ & ಕೋ.' ಸಿನಿಮಾ ಖ್ಯಾತಿಯ ನಟಿ–ನಿರ್ದೇಶಕಿ ಸಿಂಧು ಶ್ರೀನಿವಾಸಮೂರ್ತಿ ಇದೀಗ ಅಪ್ಪಟ ಕೌಟುಂಬಿಕ ಕಥೆಯ 'ಫ್ಯಾಮಿಲಿ ಡ್ರಾಮಾ' ಹೆಸರಿನ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

'ಆಚಾರ್ & ಕೋ.' ಮೂಲಕ ಹೊಸತನದ ಸಿನಿಮಾ ನೀಡಿದ್ದ ಸಿಂಧು, ಪ್ರೇಕ್ಷಕರು ತಮ್ಮ ಸಿನಿಮಾದಿಂದ ಭಿನ್ನ ಅನುಭವವೊಂದನ್ನು ಪಡೆದುಕೊಂಡು ಹೋಗಬೇಕು ಎಂದು ಬಯಸುವವರು. ಅದೇ ನಿಟ್ಟಿನಲ್ಲಿ ಪ್ರಯತ್ನ, ಪ್ರಯೋಗವನ್ನೂ ಮಾಡಿದವರು. ಅಂಥದ್ದೊಂದು ವಿಶೇಷ ಪ್ರಯತ್ನ ಈ ಹೊಸ ಸಿನಿಮಾದಲ್ಲಿ ಕೂಡ ಕಾಣಲಿದೆ ಎಂಬುದು ಅವರ ಮಾತು.

'ಈಗ ಕನ್ನಡ ಸಿನಿಮಾರಂಗಕ್ಕೆ ಬರುತ್ತಿರುವ ನಿರ್ದೇಶಕರು ಹೊಸ ಫ್ಲೇವರ್‌ಗಳನ್ನು ಸಿನಿಮಾಗಳಲ್ಲಿ ಆವಿಷ್ಕಾರ ಮಾಡುತ್ತಿದ್ದಾರೆ. ಪಾತ್ರದ ಪರಿಕಲ್ಪನೆ, ನಿರ್ದೇಶಕರ ಪ್ರಯತ್ನಗಳು ಹೊಸ ಧಾಟಿಯಲ್ಲಿ ಸಾಗುತ್ತಿವೆ' ಎಂದು ಸಿಂಧು ವಿಶ್ಲೇಷಿಸಿದ್ದಾರೆ. ತಾವೂ ಈ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮುಂದುವರೆಸುವುದಾಗಿ ಹೇಳಿದ್ದಾರೆ.

'ನಾನು ನಟಿಸುವಂಥ ಸಿನಿಮಾ, ಪಾತ್ರಗಳ ಕುರಿತು, ನಾನು ನಿರ್ದೇಶನ ಮಾಡಬೇಕಾದ ಸಿನಿಮಾಗಳ ಕುರಿತು ಬಹು ಬೇಗನೆ ಒಂದು ದೃಷ್ಟಿಕೋನ ಹೊಂದಿದ್ದೆ. ನನ್ನ ಪ್ರಕಾರ – ಸಿನಿಮಾ, ಪ್ರೇಕ್ಷಕರ ಒಳಗೊಳ್ಳುವಿಕೆ ಹಾಗೂ ಹಲವು ಸಂಬಂಧಗಳ ಅನ್ವೇಷಣೆಯ ಸುತ್ತ ಇರುವಂಥದ್ದು. ಬರೀ ಹೀರೊ–ಹೀರೊಯಿನ್ ಅಥವಾ ರೊಮ್ಯಾಂಟಿಕ್ ಸಂಬಂಧಗಳಿಗಷ್ಟೇ ಸಿನಿಮಾ ಸೀಮಿತವಾಗಿಲ್ಲ. ಅದಕ್ಕೂ ಮೀರಿ ಬೆಳೆಯಬೇಕಿದೆ' ಎಂದು ಸಂದರ್ಶನವೊಂದರಲ್ಲಿ ಮಾತನಾಡಿದ್ದಾರೆ.

'ಒಂದು ಸಿನಿಮಾ ಎಂದರೆ ನಾಯಕ–ನಾಯಕಿ ಮಾತ್ರವಲ್ಲ. ಹೊಸ ಹೊಸ ಪಾತ್ರಗಳ ಸೃಷ್ಟಿ ಈಗಿನ ನಿರ್ದೇಶಕರ ಮುಂದಿರುವ ಸವಾಲು. ಅದು ಒಡಹುಟ್ಟಿದವರು, ತಾಯಿ, ನೆರೆಹೊರೆಯವರು ಯಾವ ಪಾತ್ರವೇ ಆಗಿರಬಹುದು. ಇನ್ನೂ ಎಕ್ಸ್‌ಪ್ಲೋರ್ ಆಗಬೇಕಾದ ಸಾಕಷ್ಟು ಪಾತ್ರಗಳಿವೆ' ಎಂದು ವಿವರಿಸಿದ್ದಾರೆ.

> **ಕೇವಲ ನಾಯಕ, ನಾಯಕಿ ಅಥವಾ ರೊಮ್ಯಾಂಟಿಕ್ ಸಂಬಂಧಗಳಿಗಷ್ಟೇ ಸಿನಿಮಾ ಸೀಮಿತವಾಗಿಲ್ಲ. ಇನ್ನೂ ಎಕ್ಸ್‌ಪ್ಲೋರ್ ಆಗಬೇಕಾದ ಸಾಕಷ್ಟು ಪಾತ್ರಗಳಿವೆ, ಕಥೆಗಳಿವೆ...**

ಸಿಂಧು ನಟಿಯಾಗಿ ಕಾಣಿಸಿಕೊಳ್ಳುತ್ತಿರುವ ಮುಂದಿನ ಸಿನಿಮಾ, 'ಫ್ಯಾಮಿಲಿ ಡ್ರಾಮಾ' ಕೂಡ ಕೌಟುಂಬಿಕವಾಗಿದ್ದು, ಸಿನಿಮಾ ಹೆಸರೇ ಅದನ್ನು ಸೂಚಿಸುತ್ತಿದೆ. ಆಕರ್ಷ್ ಎಚ್.ಪಿ., ಈ ಸಿನಿಮಾ ಮೂಲಕ ಚಂದನವನಕ್ಕೆ ನಿರ್ದೇಶಕನಾಗಿ ಕಾಲಿಟ್ಟಿದ್ದಾರೆ.

ಈ ಸಿನಿಮಾದಲ್ಲಿ ತಮ್ಮನ್ನು ಸೆಳೆದ ಅಂಶದ ಬಗ್ಗೆಯೂ ಸಿಂಧು ಮಾತನಾಡಿದ್ದಾರೆ. ''ಆಚಾರ್ & ಕೋ.' ನಂತರ ಹಲವು ಸಿನಿಮಾ ಆಫರ್‌ಗಳು ನನ್ನ ಬಳಿಗೆ ಬಂದವು. 'ಕ್ಷಮಿಸಿ, ಇದು ನನಗೆ ಮ್ಯಾಚ್ ಆಗುವುದಿಲ್ಲ' ಎಂದು ನಾನು ಹೇಳಿದ್ದೆ. ಆದರೆ 'ಫ್ಯಾಮಿಲಿ ಡ್ರಾಮಾ' ಸ್ಕ್ರಿಪ್ಟ್ ಕೇಳಿದಾಕ್ಷಣ ಒಪ್ಪಿದ ಕಾರಣ, ಇದು ಕೌಟುಂಬಿಕ ಕಥೆ ಎನ್ನುವುದು. ತಾಯಿ, ಅವಳ ಮಕ್ಕಳು, ಹೀಗೆ ಒಂದು ಕುಟುಂಬದ ಈ ಕಥೆ ನನ್ನನ್ನು ಸೆಳೆಯಿತು. ರೇಖಾ ಕೂಡ್ಲಿಗಿ ಅವರು ನಿಭಾಯಿಸಿರುವ ತಾಯಿ ಪಾತ್ರವಂತೂ ತುಂಬಾ ಚೆನ್ನಾಗಿದೆ. ಸ್ಟಿರಿಯೊಟಿಪಿಕಲ್ ತಾಯಿಯ ಪಾತ್ರದಂತೆ ಅತ್ತು, ಜಾಗ ಖಾಲಿ ಮಾಡುವಂಥ ಪಾತ್ರವಲ್ಲ. ಸಿನಿಮಾವನ್ನು ಮುಂದಕ್ಕೆ ಕೊಂಡೊಯ್ಯುವ ಪಾತ್ರವದು. ಪ್ರೇಕ್ಷಕರಿಗೆ ಬೇಗ ಕನೆಕ್ಟ್ ಆಗುತ್ತದೆ''.

ಕನ್ನಡದಲ್ಲಿ ಮಹಿಳಾ ಸಿನಿಮಾ ಬರಹಗಾರರ ಕುರಿತು ಮಾತನಾಡುತ್ತಾ, ''ಮಹಿಳೆ ಪಾತ್ರವನ್ನು ಮಹಿಳೆ ಮಾತ್ರ ಚೆನ್ನಾಗಿ ಚಿತ್ರಿಸಬಲ್ಲಳು ಎಂದಿಲ್ಲ. ಉದಾಹರಣೆಗೆ, ಇತ್ತೀಚಿನ 'ಟೋಬಿ' ಹಾಗೂ 'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾಗಳಲ್ಲಿ ರಾಜ್ ಬಿ. ಶೆಟ್ಟಿ ಅವರು ಮಹಿಳೆಯ ಪಾತ್ರವನ್ನು ತುಂಬಾ ಚೆನ್ನಾಗಿ ಚಿತ್ರಿಸಿದ್ದಾರೆ. ತಮ್ಮ ಅನುಭವದಿಂದ, ಬೇರೊಬ್ಬರ ಜಾಗದಲ್ಲಿ ನಿಂತು ನೋಡುವುದರಿಂದ ಅವರ ಪ್ರಪಂಚ ಸಂಪೂರ್ಣ ಕಾಣಬಲ್ಲದು' ಎಂದು ಹೊಗಳಿಕೆಯ ಮಾತನಾಡಿದ್ದಾರೆ.